Received on 13/11/2020
NVP.

**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ಆಯವ್ಯಯ/ಸುತ್ತೋಲೆ/ಸ.ಪ್ರ.ದ.ಕಾ/21/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿ:12ನೇ ನವೆಂಬರ್ 2020.

## ಸುತ್ತೋಲೆ

ವಿಷಯ ಇಲಾಖಾ ವ್ಯಾಪ್ತಿಯ ಕಛೇರಿ / ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ **DSC KEY** ಅನ್ನು ಮುಂಚಿತವಾಗಿ ನವೀಕರಣ ಮಾಡಿಸಿಕೊಳ್ಳುವ ಬಗ್ಗೆ.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಛೇರಿ/ ಕಾಲೇಜುಗಳಲ್ಲಿ ವೇತನ ಮತ್ತು ವೇತನೇತರ ಬಿಲ್ಲುಗಳನ್ನು ಕಡ್ಡಾಯವಾಗಿ ಖಜಾನೆ-2 ಮೂಲಕ ಕ್ಲೇಮು ಮಾಡಬೇಕಾಗಿರುತ್ತದೆ. ಡಿ.ಡಿ.ಒ ಅಧೀಕ್ಷಕರು ಮತ್ತು ವಿಷಯ ನಿರ್ವಾಹಕರು ಪ್ರತಿ ಬಾರಿ **DSC KEY** ಗಳನ್ನು ಬಳಸುವಾಗ ಅವುಗಳ ಮುಕ್ತಾಯದ ಅವಧಿಯನ್ನು ಮುಂಚಿತವಾಗಿಯೇ ತಿಳಿಯಬಹುದಾಗಿರುತ್ತದೆ. ಆದಾಗ್ಯೂ ಹಲವು ಕಾಲೇಜು/ಕಛೇರಿಯ ಡಿ.ಡಿ.ಒ ಗಳು ಮತ್ತು ಇತರೆ ಸಿಬ್ಬಂದಿಗಳ ನಿರ್ಲಕ್ಷತೆಯಿಂದ ಮುಂಚಿತವಾಗಿಯೇ **DSC KEY** ನವೀಕರಣ ಮಾಡಿಸಿಕೊಳ್ಳದೆ ವೇತನ/ವೇತನೇತರ ಬಿಲ್ಲುಗಳನ್ನು ಸಕಾಲದಲ್ಲಿ ಖಜಾನೆಗಳಿಗೆ ಸಲ್ಲಿಸದೇ ಇರುವುದರಿಂದ ಸಂಬಂಧಿತ ಕಾಲೇಜು/ಕಛೇರಿ ಸಿಬ್ಬಂದಿಗಳಿಂದ ಕೇಂದ್ರ ಕಛೇರಿಗೆ ದೂರುಗಳು ಸ್ವೀಕೃತವಾಗುತ್ತಿವೆ. ನವೀಕರಣದ ನೆಪಮೊಡ್ಡಿ ಅನುದಾನ ಬಳಕೆ ಮಾಡಲು ನಿಗಧಿಪಡಿಸಿರುವ ಅವಧಿಯನ್ನು ವಿಸ್ತರಣೆ ಮಾಡಲು ಹಾಗೂ ಅನುದಾನವನ್ನು ಬಳಸಿಕೊಳ್ಳದೇ **lapse** ಮಾಡಿ ಕೇಂದ್ರ ಕಛೇರಿಗೆ ಪದೇ ಪದೇ ಪತ್ರ ವ್ಯವಹಾರ ಮಾಡುತ್ತಿರುವುದು ಕಂಡುಬಂದಿರುತ್ತದೆ. ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಇನ್ನು ಮುಂದೆ **DSC KEY** ನವೀಕರಣ ನಿಗಧಿತ ಅವಧಿಯೊಳಗೆ ಮಾಡಿಸಿಕೊಳ್ಳುವಲ್ಲಿ ನಿರ್ಲಕ್ಷತೆ ವಹಿಸಿ ಅನಗತ್ಯ ವಿಳಂಬ ಅಥವಾ ಅನುದಾನ ವ್ಯಪಗತ ಮಾಡಿರುವುದು ಕಂಡುಬಂದಲ್ಲಿ ಸಂಬಂಧಿತ ಅಧಿಕಾರಿ/ನೌಕರರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

**ಕಾಲೇಜು ಶಿಕ್ಷಣ ನಿರ್ದೇಶಕರು**

**ಪ್ರತಿಯನ್ನು:**

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಅಗತ್ಯ ಕ್ರಮಕ್ಕಾಗಿ
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ -ಅಗತ್ಯ ಕ್ರಮಕ್ಕಾಗಿ
3) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
4) ಕಛೇರಿ ಪ್ರತಿ.